ಒಂದಾಣೆ ಮಾಲೆ 276

ಬೆಟ್ಟಯ್ಯನ ಗುಡಿಗೆ

(ರೆಡಿಯೋ ಏಕಾಂಕ ನಾಟಕ)

*

ರಚಯಿತ:

ಡಿ. ಮಹಾಲಿಂಗ ಭಟ್ಟ, ವಿದ್ವಾನ್,

ಕನ್ನಡ ಪಂಡಿತ, ಸಿಂಗನಲ್ಲೂರ್.

*

1960

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

“ಬೆಟ್ಟಯ್ಯನ ಗುಡಿಗೆ”

(ಏಕಾಂಕ ರೇಡಿಯೊ ನಾಟಕ)

ಪಾತ್ರಗಳು:

೧. ದೊಡ್ಡಿಸಿದ್ದ — ಮಾದೇಶನ ಬೆಟ್ಟಕ್ಕೆ ಪರಿಶೆ ಹೊರಟ ಭಕ್ತ.
೨. ಚಿಕ್ಕಾಳ — ದೊಡ್ಡಿಸಿದ್ದನ ಒಡನಾಡಿ.
೩. ಬಸವಣ್ಣ } ಸಂತೆ ಮಡಗುವ ವ್ಯಾಪಾರಿಗಳು.
೪. ನಾಗಣ್ಣ
೫. ಡಾಕ್ಟರು — ಪರಿಶೆ ಜನಕ್ಕೆ ಔಷಧೋಪಚಾರಗೈಯಲು ನಿಯಮಿತನಾದ ವೈದ್ಯ.

ನಿರೂಪಕ.

ನೋಟ ೧

(ಬಸವೇಶ್ವರ ಗುಡಿ. ಸುತ್ತಲೂ ನೆರೆದ ಪರಿಶೆಯ ಗದ್ದಲ. ಠಣ್ ಠಣ್ಣನೆ ಗುಡಿಯ ಗಂಟೆ ಬಾರಿಸುವುದು. ಅನತಿ ದೂರದಲ್ಲಿ ಕಂಸಾಳೆದ ತಾಳದೊಂದಿಗೆ ಈ ಹಾಡು ಕೇಳಿಬರುವುದು—)

“ಮಲೆಯ ಮಾದೇವನ್ನ ನೆಲೆಯ ಕಂಡವರಿಲ್ಲ
ಏಳುಮಲೆಯಲ್ಲಿ ಒರಗಿರುವ, ಮಾದೇವ್ನ
ನೆಲೆಯ ತೋರಿದೊ ಹುಲಿಗಳು ॥

ಮಲ್ಲೀಗೆ ಹೂವ್ನಾಗೆ ಚೆಲ್ಲೀತು ನಿನ್ ಪರಶೆ
ಚೆಲ್ಲಾಟಗಾರ ಮಾದೇವ, ನಿನ್ಪರಶೆ
ಚೆಲ್ಲಿ ಕಾದಳ್ಳಿ ಕಣಿವೇಲಿ! ॥”

(ಕಂಸಾಳವ ಲಯಬದ್ಧ ರಣಿತ. ಇನ್ನೂ ದೂರ ಬೀದಿಯಲ್ಲಿ—)

ದೊಡ್ಡಿಸಿದ್ದ: ಲೋ! ಚಿಕ್ಕಾಳ, ಲೋ! ಎಷ್ಟೊತ್ನಲ್ಲಿ ಹೊಂಟ್ರಪ್ಪಾ, ಪರಿಶೆ? ಆಳು-ಕಾಳು, ರಾಗಿ-ಜೋಳ, ಚೆನ್ನಾಗಿದೆಯಾ?

ಚಿಕ್ಕಾಳ: ಅದೇನ್ ಕೇಳ್ತೀಯಾ, ದೊಡ್ಡಿಸಿದ್ದ? ಪಂಚೇನೋ? ಯಾವಾಗಾಂದ್ರೆ ಆಗ ಹೊರಡೋದು. ಹುಂ....ಮಾದೇಶ್ನ ದಯದಿಂದ ಹೊಲ-

ಗಿಲ ಚೆನ್ನಾಗಿದ್ದಾವಪ್ಪ. ಹೋದನೇ ವರ್ಷಕ್ಕಿನ್ನ ಈ ವರ್ಷವೇ ಚೆನ್ನು ಕಣೋ! ರಾಗಿ ಬಿತ್ನೆ ಆಗುತ್ಲೂ ಹಸನಾಗಿ ಕುಟುಕ್ಲು ಮಳೆ ಬೀಳ್ತಾನೇ ಇತ್ತು! ಪೈರೂ ಚೆಂದಾಗಿ ಎದ್ಬಿಡ್ತು....ಇನ್ನೇನು? ಒಕ್ಕಣೆ ವೇಳೆಗೆ ತಾನೇ ತಾನಾಗಿ ಬಂದ್ಬಿಡ್ತೆ!

ದೊಡ್ಸಿದ್ದ: ಹೂಂ, ಅನ್ನು. ನಮ್ಮೂರಲ್ಲೂ ಇಷ್ಟೆ. ಜನಕ್ಕೆ ಯಾವುದರದ್ದೂ ಯೋಚ್ನೇನೇ ಇಲ್ಲಾ. ಅಷ್ಟು ಚಂದಾಗಿದೆ! ಅದಕ್ಕೇ ಊರಿಗೂರೇ ಪರಿಶೆ ಹೊಂಟ್ಬಿಟ್ಟವ್ರೆ. ಈ ವರ್ಷದ್ದು ಏನು ಪರಿಶೆ ಅಂತೀ ಯಾ? ನನ್ಕೇಳಿದ್ರೆ....ನನ್ಗೆ ಬುದ್ಧಿ ಬಂದಂದಿನಿಂದ್ಲೂ ಈತರ ಪರಿಶೆ ಕಾಣೆ!

ಚಿಕ್ಕಾಳ: ಹೂಂ ಕಣಪ್ಪಾ! ನಮ್'ಗೆ ಅವ ಕಾಳುಕಡ್ಡಿಯಾಗಿ ಕೊಡ್ತಾನೆ....ಅವನ್'ಗೆ ನಾವದನ್ನ ಕಾಣಿಕೆಯಾಗಿ ಕೊಡ್ತೇವೆ.

ದೊಡ್ಸಿದ್ದ: ಅಷ್ಟೇ ಅಷ್ಟೆ....ಕಡಲನೀರು ಮೋಡವಾಯಿತ್ತೆ. ಮೋಡದ್ನೀರು ಕಡಲಿಗೆ ಹೋಯಿತ್ತೆ. ಅಷ್ಟೃತ್ನಲ್ಲಿ ಭೂಮಿ ಜನಕ್ಕೆ ಸುಖವಾಯಿತ್ತೆ....ಅದೇ ತರ ದೇವರಾಟ!!

ಚಿಕ್ಕಾಳ: ಹೂಂ....ಅಂದ್ಹಾಗೆ....ನಿಮ್ಮ ಮೂರ್ನೇ ಮಗಳ್ಗೆ ಲಗ್ನವಾಯ್ತೋ! ಅಲ್ಲ, ಇನ್ನೂ ಇಲ್ವೊ?

ದೊಡ್ಸಿದ್ದ: ನಿಂಗೆ ಸಮಾಚಾರನೇ ಗೊತ್ತಿಲ್ವಲ್ಲಾ! ಹೋದ ವರ್ಷದಲ್ಲೇ ಅವಳ ಲಗ್ನವಾಗಿತ್ತು. ಗಂಡು ಪರವಾಗಿಲ್ಲ....ಚಿಕ್ಕ ಸಂಸಾರ.... ಅತ್ತೆಮಾವಂದ್ರಿಗೆ ಸೊಸೇಂದ್ರೆ ಪಂಚಪ್ರಾಣ. ಹಬ್ಬಹುಣ್ಣಿಮೆಗಳಿಗೆ ಬಂದು ಹೋಯ್ತಾರೆ. ಅಷ್ಟೆ ತಾನೇ? ಹೆಣ್ಣು ಹೆತ್ತವರಿಗೂ ಅದೇ ಸಂತೋಷ. ಮಾದೇವ ಹರಸ್ಯಾನು. ನನ್ನಿಷ್ಟ ಉಳಿಸೋಕ್ಕೆ....ಒಬ್ಬ ಮೊಮ್ಮಗ.... ಗಂಡುಮಗು ಹುಟ್ಲಿ!

ಚಿಕ್ಕಾಳ: ಹರಸದೇ ಉಂಟೆ? ಇಷ್ಟು ನಡೆಸಿದ ದೇವರು ಇಷ್ಟು ಮಾಡೋಲ್ವೆ?

ದೊಡ್ಸಿದ್ದ: ಖಂಡಿತವಾಗಿಯೂ. ಅದಕ್ಕೇ ಮಾದೇವ್ನಾ ಮಾದೇಶ ಅನ್ನೋದು. ನಿನ್ ಮಗ....ಅಲ್ಲ ನಿಂಗೊತ್ತಿಲ್ಲದೆ ಉಂಟೆ? ಹುಂ, ಮಲ್ಲೇಶ ಚಿಕ್ಕತನದಲ್ಲಿ ಎಷ್ಟೊಂದು ಹುಡ್ಗಾಟ ಮಾಡ್ತಿದ್ದ? ಚಿಗುರುಮೀಸೆ ಬಂದ್ಮೇಲೂ....ಏನು ಹೇಳಿದ್ರೂ ಅವ ಪೂರಾ ತಿರ್ಗಾ ಮುರ್ಗಾ. ಆಡಿದ್ದು ಮಾಡಿದ್ದೆಲ್ಲಾ ಮುಸಿಯಾಗ್ತಿತ್ತಲ್ಲಾ? ಆ ಮೇಲೆ....ಈಗ? ಲಕ್ಷಣವಾಗಿದ್ದಾನೆ.... ಸ್ಕೂಲಲ್ಲಿ ಓದ್ತಾನೆ, ಬರೀತಾನೆ....ಅಲ್ವೆ ಹೇಳು.

ಚಿಕ್ಕಾಳ: ಹೌದು ಮತ್ತೆ. ನೀನೆಂದ ಮಾತು ಹದಿನಾರಣೆ ಸತ್ಯ. ಇದೇ ಮೊನ್ನೆ, ಬೆಂಗ್ಳೂರೊಳಗೆ ಯಾವುದೋ ಪಂದ್ಯದಲ್ಲಿ ಬೆಳ್ಳಿ ಪದಕ ಗಿಟ್ಸಿಸ್ಕೊಂಡ. ಈಗೇನೂ ಅವನಾಡಕ್ತೆ ಹಾಳಲ್ಲ. ಇನ್ನೇನು? ಅವನ ಓದು ಮುಗೀತೂಂದ್ರೆ ಸರಿ.... ಹೊಲ-ಗದ್ದೇನೆಲ್ಲಾ ಅವನ್ ಕೈಗೆಕೊಟ್ಟು.... ನಾನಂತೂ ಚಿಟ್ಟಕ್ಕೆ ಹೋಗಿರ್ತೇನೆ. ಮಾದೇಶ್ನ ಗ್ಯಾನದಲ್ಲೇ ಪ್ರೈ ಸವೆಸ್ತೇನೆ.

ದೊಡ್ಸಿದ್ದ: ಲೋಲೊ! ಚಿಕ್ಕಾಳ! ನೋಡು. ನಾವು ಮಾತಾಡುತ್ತಿದ್ದಂತೆಯೇ ಎಷ್ಟು ದೂರಾ ಬಂದ್ಬಿಟ್ವಿವು! ಮಾತ್ನಲ್ಲಿ ದಾರಿ ಸವೆದದ್ದೇ ಗೊತ್ತಾಗಿಲ್ಲ. ಅದೋ! ಬಸವೇಶ್ವರನ ಗುಡಿಬಂತು. ಬಸವಪ್ಪನಿಗೆ ಹಣ್ಣು-ಕಾಯಿ ಒಡೆಸಿದ ಮೇಲೆ ತಾನೆ ಹೋಗ್ಬೇಕು.

ಚಿಕ್ಕಾಳ: ಅಲ್ಲದೇ ಉಂಟೆ? ಮೊದ್ಲು ಬಸವೇಶ್ವರನಿಗೆ ಮತ್ತೆ ಮಾದೇಶನಿಗೆ. ಸರಿ. ಹಣ್ಣು-ಕಾಯಿ ಇಲ್ಲೇ ಕೊಂಡ್ಕೊಂಡ್ರಾಯ್ತು. ಬಾ.

ದೊಡ್ಸಿದ್ದ: ಸರಿಯಪ್ಪಾ. ಆಂ....ಆದ್ರೆ....ಇಲ್ನೋಡು....ಈ....ಈ ಗುಡಿಗೊಳ್ ಮುಂದೆ ಯಾವಾಗ್ಲೂ ಎಲ್ಲದಕ್ಕೂ ಬೆಲೆ ಹೆಚ್ಚು....ಅದೂ ಹುಳುಕ್ಲೂ, ಕೆಟ್ಲೂ? ಸಿಗುವುದು.

ಚಿಕ್ಕಾಳ: ಹೇಗಿದ್ರೂ ತೆಕ್ಕೊಳ್ಳದೆ ಆಯಿತ್ತೆಯೆ? ಹುಳುಕಾದ್ರೆ ಹುಳುಕ್ಲು! ಬೇರೇನೂ ಉಪಾಯ ಇಲ್ವಲ್ಲಾ? ಹಾಗಲ್ಲದಿದ್ರೆ, ನಾವೇ ಊರಿಂದ ಬರ್ತಾ ತರ್ತಿದ್ರೆ ಚೆನ್ನಾಗುವುದು....

ದೊಡ್ಸಿದ್ದ: ಆದ್ರೆ ತಂದೇ ಇಲ್ಲಲ್ವಾ?

ಚಿಕ್ಕಾಳ: ಹೋಗ್ಲಿ, ಈಗೇನಾಯ್ತು? ಹುಳುಕೇನು? ಕೆಟ್ಟೇನು? ಅದೂ ಮಿಕ್ಕದ್ರಂತೆ ಎಳಸು ಬಲಿತದ್ದಲ್ವೆ? ಹಾಳೂ ಎಂಜಲೂ ಅಲ್ಲದ್ದು ಈ ಭೂಮಿಯೊಳಗೆ ಏನಿದೆ? ಹೂವು ಹುಳುವಿನ ಎಂಜಲಲ್ವೆ? ಹಾಲು ಕರುವಿನ ಎಂಜಲಲ್ವೆ?

ದೊಡ್ಸಿದ್ದ: ಹುಂ....ನೀನೆನ್ನುವುದೇ ಸರಿಯಪ್ಪಾ.

ಚಿಕ್ಕಾಳ: ಸರಿ ಬಾ, ಮತ್ತೆ. ಇಲ್ಲೇ ವ್ಯಾಪಾರಮಾಡ್ಕೊಂಡು ಬಸವೇಶ್ವರನಿಗೆ ಒಡೆಸೋಣ! ಧೂಪ ಹಾಕಿಸೋಣ!

ದೊಡ್ಸಿದ್ದ: ಸರಿ. ಹಾಗೆ ಮಾಡುವ.

("ಎಳನೀರು, ಎಳನೀರು" "ಧೂಪಕ, ಧೂಪಕ" ಎಂಬ ಕಿರಿಚಾಟಗಳು.)

ತೆರೆ.

ನೋಟ ೨

ನಿರೂಪಕ: ಅದೊ! ಈ ಕಡೆ ಇಬ್ಬರು ಸಹೋದ್ಯೋಗಿಗಳು ಯೋಗ ಕ್ಷೇಮ ವಿಚಾರಿಸುತ್ತ ನಡೆಯುತ್ತಿರುವರು! ನಾಗಣ್ಣ-ಬಸವಣ್ಣರಿಬ್ಬರ ಮುಖವೂ ಕಳೆಗುಂದಿದೆ!

ಬಸವಣ್ಣ: ಅದು ಸರಿ ನಾಗಣ್ಣ! ಹುಂ....ಈ ಪರಿಶೇನಲ್ಲಿ ಕಾಯಿ ವ್ಯಾಪಾರ ಹೇಗಿತ್ತು?

ನಾಗಣ್ಣ: ಸುಖವಿಲ್ಲ ಕಣೋ ಬಸವಣ್ಣ! ಹಾಳಾದ್ದು....ಈಚೆಗೇನ ಹಾಗೆ....ಈ ದರಿದ್ರ ಮುಂಡೆ ಹೆತ್ತವು....ಬರುತ್ತಾ ಮನೆಯಿಂದಲೇ....ಕಾಯಿ ಎತ್ಕೊಂಡು ಬರ್ತಾವೆ.

ಬಸವಣ್ಣ: ಹೂಂ....ಅದೇ ಅದೇ........ನಾನು ಹೇಳ್ಬೇಕಾದನ್ನ ನೀ ಹೇಳಿದೆ. ಅಷ್ಟೆ. ಅದ್ಯಾಕೆ....ನನ್ನ ನಿನ್ನ ವಿಚಾರ....ಪಂತೇಲಿ ಯಾರನ್ನ ಬೇಕಾದ್ರೂ ಕೇಳ್ನೋಡು....ಎಲ್ಲರೂ ಹೇಳೋದು ಇದೇ ಮಾತು ....

ನಾಗಣ್ಣ: ಅಲ್ಲಕ....ಈ ಜನಗಳ ಭಕ್ತೀಂದ್ರೆ....ಇದೋ!....ಬರ್ತಾವೆ.... ಕಾರಿಮಂದಿ ಕಂಡ್ಹಾಗೆ ಬರ್ತಾವೆ....ಹಗಲೂ ರಾತ್ರಿ ಪುರ್ಸೊತ್ತಿಲ್ಲ....ಯಾವ ದೇವ್ರೋ, ಯಾವ ಭಕ್ತಿಯೋ? ನಾ ಬೇರೆ ಕಾಣೆ....ಇಲ್ಲ, ನೀ ಹೇಳು.... ಹೀಗೆ ಪರಿಶೆ ಹೋದರೆ ಪಾಪವೋ, ಪುಣ್ಯವೊ?

ಬಸವಣ್ಣ: ಪುಣ್ಯ? ಪುಣ್ಯ ಎಲ್ಲಿ ಬಂತು? ಪುಣ್ಯಾಂದ್ರೆ, ಕಪ್ಪೋ, ಬಿಳಿಯೋ ಅಂತ ಈ ಮಂದಿಗೆ ಗೊತ್ತಿದ್ರೆ ತಾನೆ?....

ನಾಗಣ್ಣ: ಈ ಜನ್ರ ಲೆಕ್ಕಾಚಾರ ನೋಡಿದ್ರೆ....ನಾವೇನು ಹುಡುಗಾಟ ಆಡೋದೂಂತ ತೋರ್ಬೇಕು....ಅಲ್ಲ, ನಮಗೇನೂ ಪಾಪ—ಪುಣ್ಯಗಳ ವಿಚಾರಾನೇ ಗೊತ್ತಿಲ್ವೆ?....ಬಸವೇಶ್ವರನ ಮುಂದೆ....ಗುಡೀ ಮುಂದೆ ನಾವು ಕೂತ್ಕೊಂಡು ಹಗಲೂ ರಾತ್ರಿ ತಪಸ್ಸುಮಾಡೋದು ಯಾವ ದೇವ್ರ ಪ್ರೀತಿಗಂತೆ? ಅಲ್ಲ....ನಮ್ಮ ಹೊಟ್ಟೆ ಉರಿಸ್ಕೊಂಡು ಇವ್ರು ಬಿಟ್ಟುಕ್ಹೋದ್ರೇನು? ಕೈಲಾಸಕ್ಹೋದ್ರೇನು?

ಬಸವಣ್ಣ: ಏನೋ ಈ ವರ್ಷವಾದ್ರೂ ಪರಿಶೇನಲ್ಲಿ ಅನ್ಯಾಯ ವಾಗ್ಲಿಕಿಲ್ಲಾಂತ ಅಲ್ಲಿಂದ ಇಲ್ಲಿಂದ ಸಾಲತೆಕ್ಕೊಂಡು ಅಷ್ಟು ನಂಜನಗೂಡು ರಸಬಾಳೆ....ಸೇಲಂ ಪಾಲಂ ಅಂತ ಕೂಡಿಸಿ ಮಡಗಿದ್ದೆ....ಈಗ್ಗೆ ನಾಲ್ಕು ವರ್ಷದಿಂದ ಬೇಕಾದಷ್ಟು ಸಾಲ ಹೊರಿಸಿಕೊಂಡಿವ್ನಿ. ಇದೆಲ್ಲಾ ಈ ಪರಿಶೇ

ಮೇಲೆ ವಿಶ್ವಾಸವಿಟ್ಟು ತಾನೆ?....ಈಗ ಚೆನ್ನಾಯ್ತು....ಸಾಲ್ಮಕ ಜೊತೆಗೆ ಐದೂ ಸೇರಿಕೊಂಡ್ತು....ಹೀಗಾದ್ರೆ ಪರಿಶೇಗೆ ಮುನ್ನ ನಾವೇ ಬೆಟ್ಟ ಸೇರ್ಬೇಕು.

ನಾಗಣ್ಣ: ಏಳೇಳು ಜನ್ಮದಲ್ಲಿ ದುಡಿದರೂ ಈ ಸಾಲದ ಹಂಗು ತೀರೋ ಹಾಗಿಲ್ಲ. ಹೀಗೆ ಹಣ್ಣು-ಕಾಯಿ ವ್ಯಾಪಾರವನ್ನೇ ನಂಬಿದ ನಮ್ ತಲೇ ಮೇಲೆ....ನಂಮಕ್ಳ ಹೊಟ್ಟೇ ಮೇಲೆ ಕಲ್ಲುಹಾಕಿದ ಜನ ಎಲ್ಲಿ ಹೋದ್ರೂ ಉದ್ಧಾರವಾಗೋಕಿಲ್ಲ

ಬಸವಣ್ಣ: ಹಾಗೆ ಹೇಳು ಮತ್ತೆ....! ಮನೆಗೆ ಬೆಂಕಿ ಹಚ್ಚಿಕೊಂಡು, ಬೀಡಿಗಾಗಿ ಒದ್ದಾಡಿದನಂತೆ ಅಂದ್ಹಾಗಾಯ್ತು-(ಸ್ವಲ್ಪ ತಡೆದು) ಅಯ್ಯೋ! ಸಾಕಪ್ಪಾ ಸಾಕು ಇದರ ಸಹವಾಸ.

ನಾಗಣ್ಣ: ತಾಳಪ್ಪ ಸ್ವಲ್ಪ. ಹಾಗೇ ನಮ್ ಪೂಜಾರೀನ್ನ ನೋಡ್ಕೊಂಬರ್ತೀನಿ....ಅವನಿಗೆ ಹೇಗಿದ್ರೂ ದಕ್ಷಿಣೆ-ಕಾಣಿಕೇಂತ ಆರ್ಕಾಸು, ಮೂರ್ಕಾಸು ಬಂದಿರ್ತೆ....ಹೇಗಾದ್ರೂ ಸ್ವಲ್ಪ ಕೈಕಡ ಈಸ್ಕೊಳ್ತೀನಿ.... (ದೂರ ಸರಿಯುವ ಸಪ್ಪಳ).

ಬಸವಣ್ಣ: (ಸ್ವಗತ) ಹುಂ....ಪೂಜಾರಿ ಕೊಟ್ಟರೆ ಈ ನಾಗಣ್ಣ ಹೇಗಾದ್ರೂ ನಿಭಾಯಿಸ್ತಾನೆ....ಆದ್ರೆ ನನ್ಗತಿ?....ಈಗ ಮನೆಗ್ಹೋದ್ರೆ ಮನೆಯವಳದ್ದಂತೂ ಬಗೆಹರಿಯದ ಒಗಟಾಗಿ ನಿಂತಿದೆ! (ಸ್ವರ ಬದಲಿಸಿ) ಇಲ್ಲ, ಬಗೆಹರಿಯುವುದಾದ್ರೂ ಹೇಗೆ? ಈ ವರ್ಷದ ಪರಿಶೆಯನ್ನೇ ಅಡಮಾನ ಹಾಕಿ,....ಹೋದ ವರ್ಷ ಅವಳ ಇದ್ದಬಿದ್ದ ನಗಗಳನ್ನು ಸುಲಿದಿದ್ದೇನೆ. 'ತಾಳು....ಮುಂದಿನ ವರ್ಷ ನಿಂಗೆ ಬೆಂಡೋಲೆ, ದುಂಡುಮಲ್ಲಿಗೆ ಸರ....ಮಾಡಿಸ್ತೇನೆ' ಎಂದು ಆಸೆ ತೋರಿಸಿದ್ದಕ್ಕೇ ಪಾಪ ಎತ್ತಿಕೊಟ್ಟಿದ್ಲು....ಈಗ? ಇನ್ನು?....ನನ್ನ ಕೈಕಾಲುಗಳ ಮೂಳೆ ಮಾತ್ರ ಬಾಕಿ ಉಳಿದಿದೆ....ಶಿವ! ಮಹಾದೇವ! (ಹಿಮ್ಮೇಳದ ವಾದ್ಯಾಲಾಪನೆ) ತೆರೆ.

ನೋಟ ೨

ನಿರೂಪಕ: ಬೆಟ್ಟದ ಕೆಳಗೆ ಅಕ್ಕಿಸಾಲಿಟ್ಟಂತೆ ಪರಿಶೆಯ ಜನರು ಬರುತ್ತಿದ್ದಾರೆ! ಸಂದಣಿಯಲ್ಲಿ ಜನರ ಆರೋಗ್ಯ ರಕ್ಷಿಸುವುದಕ್ಕಾಗಿ ವೈದ್ಯಕೀಯ ಉಪಚಾರ ನಡೆಯುತ್ತಿದ್ದರೆ, ಅದೇನೋ ಜಗಳ ಎಬ್ಬಿಸುತ್ತಿದ್ದಾನಲ್ಲ ದೊಡ್ಡಸಿದ್ದ!

ದೊಡ್ಸಿದ್ದ: ಅದ್ಯಾಕೆ, ಡಾಕ್ಟ್ರು ಸಾಮಿಯೋ, ದಾರೀ ಅಡ್ಡಗಟ್ಟಿ ಕೊಂಡು ಪರಿಶೇ ಜನಕ್ಕೆ ತೊಂದ್ರೆ ಕೊಡ್ತೀರಿ?....ಅಲ್ನೋಡಿ ಹೈಕ್ಳೆಲ್ಲಾ ಚೀರ್ತಾವೆ....ಹೆಣ್ಣು ಗಂಡು ಎಲ್ಲಾ ಕೈನೋಯಿಸ್ಕೊಂಡು ನಿಂತವ್ರೆ.... ಯಾಕಾದ್ರೂ ಹೀಗೆ ಗೋಳಾಡಿಸ್ತೀರಿ....ಸರಿ....ಬಿಡೀಂದ್ರೆ ನನ್ನ....

ಡಾಕ್ಟರು: ಇದೇನಯ್ಯ ನಿನ್ನ ವೇದಾಂತ?....ಹಾಗಿದ್ರೆ....ಮಕ್ಕಳ ಗೋಳಾಟಕ್ಕೆ ನೀ ಹೇಳುತ್ತಿಲ್ಲ ಅನ್ನು. ನಿನ್ನನ್ನು ಮಾತ್ರ ಬಿಡ್ಬೇಕಲ್ವೇ? (ನಗು)....ಪರವಾಗಿಲ್ಲ ಕಣೋ ನೀನು!....ಎಲ್ಲಿ ಹೀಗೆ ಬಾ....

ದೊಡ್ಸಿದ್ದ: ಅದಾಗೋದೇ ಇಲ್ಲ....ಜೋಕೆ ನನ್ನ ಮೈಮುಟ್ಟಿದ್ರೆ ನೆಟ್ಟಗಾಗೋಲ್ಲ...ನಾವು ನಿರಾಲಸ್ಸಾಗಿ ಪರಿಶೇಹೋಗ್ಬೇಕು....ಯಾವ ಸರ್ಕ್ಯಾರಾನೂ ಅಡ್ಡಿ ಮಾಡೋಕಿಲ್ಲ....ಯಾಕೀ ಒದ್ದಾಟ? ಬಿಡೀಂದ್ರೆ....

ಡಾಕ್ಟರು: ಅದು ಹಾಗಿರಲಯ್ಯಾ! ಈಗ ಇದಕ್ಕುತ್ತರ ಹೇಳು. ಆ ಮೇಲೆ ನಿನ್ನನ್ನು ಬಿಟ್ಬೇ ಬಿಡ್ತೇನೆ. ಹುಂ....ನೀವು ಹೀಗೆ ಪರಿಶೆ ಬರೋ ದಕ್ಕೆ ಹೇಳಿನವರ್ಯಾರು? ನನಗೆ ಬೇಡದ ಈ ಒದ್ದಾಟ ನಿಮಗೇಕೆ ಹೇಳು?

ದೊಡ್ಸಿದ್ದ: ಯಾರೆಂದ್ರು ಅಂತೀರಾ? ಬೇರೆ ಯಾರಂತಾರೆ? ದೇವರೇ ನಮ್ಮಿಂದ ಈ ರೀತಿ ಸೇವೆ ಮಾಡಿಸ್ಕೋತಾನೆ. ಆ ಮಾದೇಶನೇ ಬರಿಸ್ತಾನೆ ಹುಂ....ಇನ್ನೇನು?

ಡಾಕ್ಟರು: ಸರಿ ಮತ್ತೆ....ಮಾದೇಶ್ವರ ನಿಮಗೆ....ಪರಿಶೆ ಬರುವಂತೆ ಹೇಳಿದನಂತೆ....ಸರಿ....ಅದೇ ಮಾದೇಶ್ವರ ಸ್ವಾಮಿಯೇ ನಮ್ಮ ಜೊತೆಯಲ್ಲಿ ಹೀಗೆಂದ—“ನೋಡಪ್ಪಾ, ಕೋಟ್ಯಾನುಕೋಟಿ ಭಕ್ತರು ನನ್ನ ಸೇವೆ ಮಾಡಲು ಪರಿಶೆ ಬರ್ತಾರೆ....ಅವರ ಸುಖ-ದುಃಖ ನನ್ನ ಪಾಲಿಗೆ ಸೇರಿದ್ದು. ಆದ್ದರಿಂದ ಅವರ ಆರೋಗ್ಯ ಸ್ವಲ್ಪವೂ ಕೆಡದಂತೆ ಎಚ್ಚರಿಕೆ ವಹಿಸು; ಹುಂ, ಜೋಕೆ” ಎಂದು. ಹೀಗಿರುವಾಗ–ನೀನೇ ಹೇಳು....ನಾವೇನು ಮಾಡ್ಬೇಕು?

ದೊಡ್ಸಿದ್ದ ಅದೇನೋ....ನಾವಂತೂ ಪರಿಶೆ ಹೋಗ್ಲೇಬೇಕು.

ಡಾಕ್ಟರು: ಹೋಗಿ, ಹೋಗಿ, ಅವಶ್ಯವಾಗಿಯೂ ಹೋಗಿ....ನಾನೇನು ಬೇಡಾ ಅಂದೆನೆ?....ನೋಡು....ನೀವು ನಿಮ್ಕೆಲ್ಸ ಮಾಡ್ಲೇ ಬೇಕಂತೆ! ಹಾಗಾದರೆ ನಾನು ನನ್ನ ಕೆಲಸ ಮಾಡಬೇಡ ಅಂತೀಯಾ?

ದೊಡ್ಸಿದ್ದ: (ಅದೇ ದಾಟಿಯಲ್ಲಿ) ಮಾಡಿ, ಮಾಡಿ, ನಿಮ್ಕೆಲ್ಸ ಮಾಡಿ................

ಡಾಕ್ಟರು: ಇದೀಗ ಚೆನ್ನಾಯ್ತು....ನಿನ್ನ ಬಿಡ್ಬೇಕಂತೆ!....ಕೆಲಸ ಮಾಡ್ಬೇಕಂತೆ!....ಅದು ಹೇಗಯ್ಯಾ ಸಾಧ್ಯ?........

ದೊಡ್ಸಿದ್ದ: (ಸ್ವಗತ) ಈ ಸಾಮಿಯೋರು ಹೇಳೋ ಮಾತು ಪುದುವಾಗಿದೆ. ಅವರು ಮಾಡೋದೂ ದೇವರ ಕೆಲಸ. ನಾವು ಮಾಡೋದು ದೇವರ ಕೆಲಸ. ಈಗ ನಾವಿಬ್ರೂ ಸಮವಾಯ್ತು. ಇನ್ನು ಇವರ ಮಾತು ಮೀರಿದರೆ, ದೇವರ ಮಾತು ಮೀರಿದ್ಹಾಗೆ ಆಯಿತಲ್ಲಾ?

ಡಾಕ್ಟರು: ಯಾಕೆ ಸುಮ್ನೆ ನಿಂತಿದ್ದೀಯೆ! ಜವಾಬು ಕೊಡಯ್ಯಾ.... ಇಲ್ಲ, ನೀನೇ ಒಂದು ಉಪಾಯ ಹೇಳು,

ದೊಡ್ಸಿದ್ದ: ತಪ್ಪಾಯ್ತು ಬುದ್ಧಿ! ತಿಳಿಯದೆ ಏನೋ ಅಂದ್ಬಿಟ್ಟೆ. ನನ್ನ ಉದ್ಧಾರಮಾಡ್ಬೇಕು. ದೇವರೇ ನಮ್ಮ ಸುಖ-ದುಃಖ ನೋಡ್ಕೋತ್ತಾನೆ. ಹಾಗಿರುವಾಗ ಅವನಿಷ್ಟದಂತೆ ನಾವು ನಡೆಯಬೇಕು.

ಡಾಕ್ಟರು: ಅದು ಸರಿ. ನೋಡು, ಮೊತ್ತಮೊದಲು ರೇಗಾಡಿದೆಯಲ್ಲಾ! ನಿನ್ನ ರೇಗಾಟದಲ್ಲಿ ಅಲ್ನೋಡು,—ಜನಗಳೆಲ್ಲಾ ನುಗ್ಗುತ್ತಾರೆ.

ದೊಡ್ಸಿದ್ದ: ಅವರನ್ನೆಲ್ಲಾ ನಾನೇ ನಿಲ್ಲಿಸ್ತೀನಿ. ನೀವೆಂದ ಮಾತು ನನಗೀಗ ಮನಸ್ಸಿಗೆ ಬಂತು. (ಮಂದಿಯೊಡನೆ) ತಾಳಿ, ಸ್ವಲ್ಪ ತಾಳಿ. ನಮ್ಮ ಯೋಗಕ್ಷೇಮಕ್ಕಾಗಿ ಡಾಕ್ಟ್ರು ಉಪಚಾರಮಾಡ್ತಾರೆ. ಅಲ್ಲದೆ ಬೇರೆ ಅಲ್ಲ. ಅದೂ ಅಲ್ಲದೆ, ಇಲ್ನೋಡಿ—ಈ ಸಾಮಿಯೋರು ದೇವರು ಕಂಡ್ಹಾಗಿದ್ದಾರೆ. ನಾವು ಪರಿಶೆ ಬರೋದು....ನಮ್ಮ....ನಮ್ಮಕ್ಳ....ನಡೆ-ಮುಂದೆಗಳ ಏಳ್ಗೆಗಾಗಿ ತಾನೆ? ಹಾಗಿರುವಾಗ, ರೋಗರುಜಿನ ಸೋಂಕದಂತೆ ದೇವ್ರೇ ರಕ್ಷೆಮಾಡ್ತಾನೆ. ಅದಕ್ಕೆ ಅಡ್ಡಿಮಾಡ್ಬಾರ್ದು. ತಾಳಿ, ಆ ಮೇಲೆ ಎಲ್ಲರೂ ಜೊತೆಯಾಗಿ ನಡೆಯೋಣ,

ಡಾಕ್ಟರು: ಹೀಗೆ ನೀವು ನಗುನಗುತ್ತಾ ನನ್ನ ಕೆಲಸದಲ್ಲಿ ಸಹಕರಿಸಿದರೆ ಇನ್ನೇನು? ತಡವುಂಟೆ? ಅರೆಕ್ಷಣ....ಎಲ್ಲಿ? ಹೀಗೆ ಬನ್ನಿ, ಒಬ್ಬೊಬ್ಬರೇ ಈ ದಾರಿಯಿಂದ ಮುಂದೆ ನಡೆಯಿರಿ.

(ಒಬ್ಬೊಬ್ಬರಾಗಿ ಹತ್ತಿರ ಬಂದು ದೂರಸರಿಯುವ ಸದ್ದು.)

(ಗುಂಪಿನಲ್ಲಿ—ಓಂ ನಮಃ ಶಿವಾಯ, ಶಿವಮಹಾದೇವ! ಜೈಜೈಕಾರಗಳು ಕೇಳಿಬರುವುವು.)

ತೆರೆ.

ನೋಟ ೪

(ಭೋರ್ಗರೆವ ಬಿರುಗಾಳಿಯ ಬಿರುಸು, ಗುಡುಗಿನ ಆರ್ಭಟೆ. ಭೀಕರತೆ ಸೂಚಿಸುವ ವಾದ್ಯಸಂಗೀತ ಧ್ವನಿ.)

ನಿರೂಪಕ: ಪರಿಶೆಯ ಜನ ಮರಳುತ್ತಿದ್ದಂತೆಯೇ ಮಳೆಗರೆವ ಸೂಚನೆ ಕಾಣುತ್ತಿದೆಯಲ್ಲಾ! ಕಾರ್ಮುಗಿಲು ಗುಡುಗುತ್ತಿದೆ! ಗಾಳಿ ಆರ್ಭಟಿಸುತ್ತಿದೆ! ಜನರೆಲ್ಲ ತಲ್ಲಣಿಸಿ ದಿಕ್ಕುಕಾಣದೆ ಓಡುತ್ತಿರುವರು! ಇದೊ, ಈ ಕಡೆಯಿಂದ ಸೊಂಟಕಟ್ಟಿ ಬರುತ್ತಿರುವ ದೊಡ್ಸಿದ್ದ ಏನಾದರೂ ರಕ್ಷಣೆಮಾಡುವನೇನೊ!

ದೊಡ್ಸಿದ್ದ: ಅದ್ಯಾಕೆ ಚಿಕ್ಮಾಳ! ಹಾಗೆ ಓಡುತ್ತೀಯೆ! ಮಳೆಯಿನ್ನೂ ಬಂದಿಲ್ವಲ್ಲಾ! ನೋಡು ಈ ಜನಗಳನ್ನ ಕೊಂಚ ನಿಧಾನಿಸಿ ಹೋಗುವಂತೆ ಹೇಳು. ಸಂದಣಿಯಲ್ಲಿ ಹೆಂಡಿರು ಮಕ್ಕಳ ಪಾಡೇನೊ! ಆದ್ರೆ, ಸುಮ್ನೆ ಓಡಿದರಾಯ್ತೆ? ಹಟ್ಟಿಮನೆ ಒಂದೂ ಸಿಗೋಲ್ಲ. ಇಲ್ಲಿ ತಾಳಯ್ಯ, ಕೊಂಚ ತಾಳು!

ಚಿಕ್ಮಾಳ: ತಾಳಿಕೊಂಡೇನ್ಮಾಡ್ಬೇಕಂತೀಯಾ? ನೀನೊಬ್ಬ ತಲೆಹೋಕ! ನಿನ್ನಂತೆ ನನಗೆ ಮಳೇನಲ್ಲಿ ನನೆದರೆ ನೆಟ್ಟಗಾಗೋಲ್ಲ ಕಣೊ! ನೆಗಡಿ, ಶೀತ ಜೇರಿ.

ದೊಡ್ಸಿದ್ದ: ನಾ ಹೇಳೋದನ್ನ ಅಷ್ಟು ಕೇಳು — ಶೀತವಿದ್ರೂ ಈ ಮಳೆಯಿಂದೇನೂ ಹಾನಿಯಾಗೋಲ್ಲ. ಅದಂತಿರ್ಲಿ ಈಗ ಈ ಜನಕ್ಕೆ ಒಂದು ನೀರು ಸುರಿಯದ ತಾವು ಕಾಣಿಸ್ಬೇಕು. ಹುಂ, ಇಲ್ಲೇ ಈ ಹೆದ್ದಾರೀನ ಬಿಟ್ಟು ಎಡಕ್ಕೆ ತಿರುಗಿದ್ರೆ ಒಂದು ಪಾಳುಬಿದ್ದ ಗುಡಿಯಿದೆ. ಅದು ಈ ಹೆಂಗ್ಸರು ಮಕ್ಳಿಗೆ ಅದು ಗೊತ್ತಿಲ್ಲದಿರ್ಬಹುದು. ಆದ್ರೆ ನಿಂಗೂ ಗೊತ್ತಿಲ್ವೆ? ಹುಂ, ಹಾಗೇ ಅವರನ್ನೆಲ್ಲ ಈ ಕಡೆಗೆ ಕೂಗು.

ಚಿಕ್ಮಾಳ: ಹುಂ, ನೀ ಮುಂದೆ ದಾರಿತೆಕ್ಕೊಡು ಹೋಗು. ಹಿಂದಿನಿಂದ ನಾ ಕೂಡಿಕೊಂಡು ಬರ್ತೀನಿ.

ದೊಡ್ಸಿದ್ದ: ಹೂಂ....ಹೂಂ....ಅಷ್ಟು ಮಾಡು.

(ಮಕ್ಕಳ ಗುಲ್ಲು, ಕಾಲುಗೆಜ್ಜೆಯ ದನಿ)

(ಗುಂಪಿನಲ್ಲಿ—'ಅಯ್ಯೊ! ಈ ಹಾಳು ಮಳೆಯೆ!' ಎಂಬ ಗೋಳು.)

ಚಿಕ್ಮಾಳ: (ಗೊಣಗುತ್ತ) ಇದೊಂದು ತಲೆಹರಟೆ ಮಳೆ! ಇದು

ರಂಪಾಟಕ್ಕೆ ನ್ಯೆಯೆಲ್ಲ ಒದ್ದೆಯಾಯ್ತು. ತಲೆಯಲ್ಲಿ ಬೇರೆ ನೀರು ತೊಟ್ಟಿಕ್ಕುತ್ತೆ. ಸದ್ಯಕ್ಕೆ ಶೀತ ಹೆಚ್ಚಾಗದಿದ್ರೆ ಸಾಕಪ್ಪ,

ದೊಡ್ಡಿಸಿದ್ದ: ಅದ್ಯಾಕೆ ಹಾಗಂತೀಯಾ? ಚಿಕ್ಕಾಳ! ಕೊಂಚ ಸುಮ್ನಿರು. ನಿಂಗೇನೂ ಮಳೆ ಬೇಡ್ವೆ?

ಚಿಕ್ಕಾಳ: ಬೇಡಾ, ಅಂದೆನೆ? ಬರ್ಲಿ, ನಮ್ಮೂರಲ್ಲಿ ಬರ್ಲಿ. ಇಲ್ಲ್ಯಾಕೆ ಬೆಟ್ಟದಲ್ಲಿ? ಯಾವ ದೇವ್ರು ಪ್ರೀತಿಗೆ? ಪರಿಶೆ ಜನ ಗೋಳು ಹೊಯ್ಕೊಳ್ಳೋಕೆ?

ದೊಡ್ಡಿಸಿದ್ದ: ನಿಮ್ಮೂರಲ್ಲಿ ಮಳೆ ಬಂದ್ರೆ ಸಾಕಂತೆ! ಹಹ್ಹಹ್ಹ! ಹಾಗಿದ್ರೆ ಇಲ್ಲಿರುವವರಿಗೆ ಮಳೆಯೂ ಬೇಡ; ನೀರೂ ಬೇಡ. ಕಾಡಿನಲ್ಲಿ ಮರವೂ ಬೇಡ. ನದಿಗಳಿಗೆ ಕಟ್ಟೆಕಟ್ಟುವ ಕೆಲ್ಸಾನೂ ಇಲ್ಲ.

ಚಿಕ್ಕಾಳ: ಯಾಕಿಲ್ಲ? ನಾವು ಊರಿಗೆ ಮುಟ್ಟಿದ ನಂತ್ರ ಮಳೆ ಬೇಕಾದಷ್ಟು ಬರ್ಲಿ; ಇಲ್ಲೂ ಬರ್ಲಿ; ಅಲ್ಲೂ ಬರ್ಲಿ; ಎಲ್ಲೆಲ್ಲೂ ಬರ್ಲಿ.

ದೊಡ್ಡಿಸಿದ್ದ: ಅದಕ್ಕೇ ಎಲ್ಲೆಲ್ಲೂ ಮಳೆ ಬರೋದಕ್ಕೇ ಇದು ನಾಂದಿ. ಎಲ್ಲಾದ್ರೂ ಒಂದು ಕಡೆಯಿಂದ ಸುರುವಾಗ್ಬೇಕಲ್ಲಾ? ಇದೀಗ ಮಾದೇಶ್ವರ ನಮಗೆ ದಯೆತೋರಿದ್ದು. ನೋಡು, ಈ ಕಾಲಕ್ಕೆ ಮಳೆ ಸುರಿದ್ರೇನೇ ಊರಲ್ಲಿ ಸುಭಿಕ್ಷ ನೆಲೆಯೂರೋದು. ಅಲ್ಲದೆ, ಹಿರಿಯರು ಹೇಳೋದೂ ನೀ ಕೇಳಿಲ್ವೆ? "ಪರಿಶೆಜನ ಮರಳಿಹೊಂದ್ರೆ ಮಳೆ ಬರ್ಬೇಕು. ಆಗ ಮಳೆ ಬಂದ್ರೆ ಕಾಲಸ್ಥಿತಿ ಚೆನ್ನಾಗಿರುತ್ತೆ" ಅಂತ.

ಚಿಕ್ಕಾಳ: ಹಾಗಿದ್ರೆ ಈಗ ಸರಿಹೋಯ್ತಲ್ಲಾ?

ದೊಡ್ಡಿಸಿದ್ದ: ಹೂಂ ಮತ್ತೆ.... ಓಹೊ! ಇನ್ನು ಸ್ವಲ್ಪೇ ಹೊತ್ನಲ್ಲಿ ಮಳೆ ನಿಲ್ಲುತ್ತೆ. ಆ ಮೇಲೆ ಹೊರಟ್ರಾಯ್ತು. ಶಿವಮಹಾದೇವ!

('ಟಂ ಟ ಟಣ್ಣ'ನೆ ಕಂಸಾಳದ ತಾಳ)

"ಸಂಪೀಗೆ ಹೂವ್ನಾಗೆ ಗುಂಪೆದ್ದು ನಿನ್ ಪರಿಶೆ
ಸಂತೋಷಗಾರ ಮಾದೇವ! ನಿನ್ಪರಿಶೆ
ಗುಂಪಾಗಿ ಗೂಳ್ಯಾದ ಕಣಿವೇಲಿ! ||
ಬೆಟ್ಟದ ಕೆಳಗೇ ಅಕ್ಕಿ ಸಾಲಿಟ್ಹಾಗೆ
ಕಿತ್ತು ಬರ್ತಾರೆ ನಿನ್ಪರಿಶೆ, ಮಾದೇವ!
ಕಟ್ಟಳ್ಳಿಕ್ಕೆ ಹುಲಿಯಾ ಒಡೆಯರೊ! ||"

(ಉಪಸಂಹಾರದ ತಾಳ—ಆಲಾಪನೆಗಳು) ತೆರೆ.

ಸಂಪೂರ್ಣ.

Edited, Printed & Published by K. V. Shenoy
at The Prabhat Printers, Ltd., Mangalore.